CAREERINDIA



## ವಿಭಾಗ – 'ಎ'

### (ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** 9 × 1 = 9

1. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?
2. ವಿ.ಕೃ. ಗೋಕಾಕರ ಪ್ರಕಾರ ಗೃಹಸ್ಥಾಶ್ರಮ ಧನ್ಯ ಎಂದು ಹೇಳಿದವರು ಯಾರು ?
3. ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಭಿನ್ನಹ ಮಾಡಿದರು ?
4. ಧರ್ಮಾಧಿಕರಣರು ಸಾಕ್ಷಿ ಕೇಳಲು ಯಾರ ಬಳಿಗೆ ಹೋದರು ?
5. ಹಸಿದು ಮಲಗಿದ್ದ ಹುಲಿಯ ಮನಸ್ಸಿನಲ್ಲಿ ಬಂದ ಯೋಚನೆ ಯಾವುದು ?
6. ಮಾನವನ ಸ್ವಭಾವವನ್ನು ಬಸವಣ್ಣನವರು ಯಾವುದಕ್ಕೆ ಹೋಲಿಸಿದ್ದಾರೆ ?
7. ಕವಿ ಜಿ.ಎಸ್. ಶಿವರುದ್ರಪ್ಪನವರ ಪ್ರಕಾರ ಪ್ರತಿಯೊಬ್ಬ ಮನುಷ್ಯನು ಯಾವ ಎಚ್ಚರದಲ್ಲಿ ಬದುಕಬೇಕಿದೆ ?
8. ಒಡಲು ಅನುಭವಿಸುವ ಸಂಕಟಕೆ ಯಾವುದು ಇಲ್ಲ ?
9. ಬೇಡನು ಬೀಸಿದ ಬಲೆಗೆ ಮೊದಲು ಸಿಲುಕಿದವರು ಯಾರು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 10 × 2 = 20

10. ಗೋಕಾಕರು ಹೇಳಿರುವಂತೆ ಸಾಧಕನ ಯೋಗಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸುತ್ತಿತ್ತು ?
11. ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು ?
12. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಹೇಳಿದ ಪ್ರಸಂಗವನ್ನು ತಿಳಿಸಿ.
13. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು ?
14. ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರದಾಸಿಮಯ್ಯನವರ ಅಭಿಪ್ರಾಯವೇನು ?
15. 'ನನ್ನಾಸೆ' ಕವನದಲ್ಲಿ ಕವಯಿತ್ರಿಯು ಯಾವ ಕಾರಣಗಳಿಗಾಗಿ ಚಿಲುಮೆ ಹಾಗೂ ಊರುಗೋಲಾಗಲು ಆಸೆ ಪಡುತ್ತಾರೆ ?
16. ಹೆಚ್. ನರಸಿಂಹಯ್ಯನವರ ಪ್ರಕಾರ ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ ?
17. ಲೇಖಕಿ ಆರ್. ನಿರ್ಮಲ ತಮ್ಮ ಹೆಸರಿನ ನಾಮಫಲಕ ಬರೆಸಲು ಆಸೆಪಟ್ಟವರಲ್ಲ. ಏಕೆ ?
18. ಅಂಬೇಡ್ಕರರ ಪ್ರಕಾರ ರಾಜಕೀಯ ಸ್ವಾತಂತ್ರ್ಯದ ಮಹತ್ವವನ್ನು ತಿಳಿಸಿ.
19. 'ತಲೆಕೂದಲು' ಎಂಬ ಉತ್ತರ ಬರಲು ಜನಪದರು ಹೇಳಿರುವ ಒಗಟನ್ನು ಬರೆಯಿರಿ.



www.careerindia.com

